(20) ಹಿರಿಯೂರು ತಾಲ್ಲೂಕಿನ ಬಬ್ಬೂರು ಫಾರಂನಲ್ಲಿ ಕೃಷಿ ಸಂಶೋಧನೆ ಮಾಡುವುದು.

ಶ್ರೀ ಆರ್. ರಾಮಯ್ಯ.—ಹಿರಿಯೂರು ತಾಲ್ಲೂಕಿನ ಬಬ್ಬೂರು ಫಾರಂನಲ್ಲಿರುವ ಕೃಷಿ ಸಂಶೋಧನಾ ಕೇಂದ್ರ ಈ ಹೊತ್ತಿನಲ್ಲಿ ಹೆಚ್ಚು ಚೇತರಿಸಿಕೊಂಡು ಕೃಷಿಕರನ್ನು ಆಕರ್ಷಿಸುವ ಕೇಂದ್ರವಾಗಿರಬೇಕಾಗಿತ್ತು. ಆದರೆ ದುರದೃಷ್ಟವಶಾತ್ ಇದೊಂದು ತಲೆಬರಹ ಹೊತ್ತು ನಿಂತಿದೆ. ಇದರಿಂದಲೇ ಕೃಷಿ ಕ್ಷೇತ್ರದಲ್ಲಿ ಪ್ರಗತಿಯಾಗಲಾರದು. ಈ ಕೇಂದ್ರಕ್ಕಿರುವ ಭೂಮಿಯಲ್ಲಿ ವ್ಯವಸ್ಥೆಯಾಗಬೇಕು. ಹೊಸ ಹೊಸ ತೆರನಾದ ಬೀಜೋತ್ಪಾದನೆಯು ತಳಿಗಳು ಸಂಶೋಧನೆಯಿಂದ ಹೊರ ಬರಬೇಕು. ಮಾನವ ಶಕ್ತಿಯು ಕೊರತೆಯಾದಾಗ ಉಪಕರಣಗಳನ್ನು ಬಳಸುವ ಹೊಸ ಆಕಾಂಕ್ಷೆ ರೈತನಲ್ಲಿ ಮೂಡಬೇಕು, ಆದಕಾರಣ ಇದನ್ನು ಅಧುನೀಕರಣಗೊಳಿಸಿ ಎಲ್ಲಾ ಸವಲತ್ತುಗಳನ್ನು ಒದಗಿಸುವುದರ ಮುಖೇನ ಇದೊಂದು ಚೇತನಕಾರಿ ಕೇಂದ್ರವನ್ನಾಗಿಸಲು ಸರಕಾರ ಕೂಡಲೇ ಗಮನ ಹರಿಸಬೇಕೆಂದೂ ಮತ್ತು ಸಲಕರಣೆಗಳನ್ನು ಒದಗಿಸಲು ಮುಂದಾಗಬೇಕೆಂದೂ ಒತ್ತಾಯಿಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ತೋಟಗಾರಿಕೆ ಮತ್ತು ಕೃಷಿ ಮಂತ್ರಿ).—ರಾಜ್ಯದಲ್ಲಿ ಒಟ್ಟು ೧೬ ಕೃಷಿ ಸಂಶೋಧನಾ ಕೇಂದ್ರಗಳು ಇವೆ ಮತ್ತು ಈ ಕೇಂದ್ರಗಳಲ್ಲಿ ಸುಮಾರು ರೂ. ೪.೨ ಕೋಟಿಗಳನ್ನು ಪ್ರತಿ ವರ್ಷ ಖರ್ಚು ಮಾಡಲಾಗುತ್ತಿದೆ.

ಹಿರಿಯೂರು (ಬಬ್ಬೂರು) ಕೇಂದ್ರದಲ್ಲಿ ೧೯೮೪-೮೫ನೇ ಸಾಲಿನಲ್ಲಿ ರೂ. ೩.೯೮ಲಕ್ಷ ಖರ್ಚು ಮಾಡಲಾಗಿದೆ. ಈ ಕೇಂದ್ರದಲ್ಲಿ ಒಟ್ಟು ೩೨.೮ ಹೆಕ್ಟೇರ್ ನೀರಾವರಿ ಜಮೀನು ಇದೆ:

ಕೃಷಿ ಸಂಶೋಧನಾ ಕೇಂದ್ರ ಹಿರಿಯೂರು (ಬಬ್ಬೂರು) ೧೯೧೬ರಲ್ಲಿ ಸ್ಥಾಪನೆಯಾಗಿ ೧೯೫೫ರಲ್ಲಿ ವಿಶ್ವ ವಿದ್ಯಾನಿಲಯದ ಪರಿಧಿಗೆ ಬಂದಿರುತ್ತದೆ. ರಾಷ್ಟ್ರೀಯ ಕೃಷಿ ಸಂಶೋಧನಾ ಯೋಜನೆಯ ಆಡಿಯಲ್ಲಿ (೧೯೮೦-೮೧) ಈ ಕೇಂದ್ರವನ್ನು ವಿಶೇಷ ಕೇಂದ್ರವನ್ನಾಗಿ ಪರಿಗಣಿಸಲಾಗಿದೆ. ಭತ್ತ ಮತ್ತು ಕಬ್ಬಿನ ಮೇಲೆ ಪರಿಶೋಧನೆಯನ್ನು ಮುಂದುವರಿಸಲಾಗಿದೆ. ಅಲ್ಲದೆ ಸವಳು ಮಣ್ಣಿನ ವಿಚಾರ, ನೀರಾವರಿ ನಿರ್ವಹಣೆ, ತೆಂಗು, ರಾಗಿ. ಜೋಳ, ತೃಣ ಧಾನ್ಯ ಮತ್ತು ದ್ವಿದಳ ಧಾನ್ಯಗಳ ಮೇಲೆ ಸಂಶೋಧನೆಯನ್ನು ಮುಂದುವರಿಸಲಾಗಿದೆ.

ಪರಿಶೋಧನೆಯ ಫಲಿತಾಂಶವನ್ನು ರೈತರ ಅಭಿವೃದ್ಧಿಗೆ ಬಿಡುಗಡೆ ಮಾಡಲಾಗಿದೆ. ಒಣ ಬೇಸಾಯದ ಮೇಲೆ ಪ್ರಾತ್ಯಕ್ಷಿತೆಗಳನ್ನು ಏರ್ಪಡಿಸಲಾಗಿದೆ, ಇದಲ್ಲದೆ ಭತ್ತ, ದ್ವಿದಳ ಧಾನ್ಯ, ಜೋಳ, ಎಣ್ಣೆಕಾಳು, ಕಬ್ಬು ಜಮೀಂದರ ಹತ್ತಿ ಮತ್ತು ತೃಣ ಧಾನ್ಯಗಳ ಬೀಜೋತ್ಪಾದನೆಯನ್ನು ತೆಗೆದುಕೊಂಡು ರೈತರಿಗೂ ಮತ್ತು ಕೃಷಿ ಇಲಾಖೆಗೂ ಕೊಡಲಾಗಿದೆ. ತೆಂಗಿನ ಸಸಿಗಳನ್ನು ಬೆಳೆಸಿ ರೈತರಿಗೆ ಹಂಚಲಾಗಿದೆ.

ರಾಷ್ಟ್ರೀಯ ಪ್ರಾತ್ಯಕ್ಷಿತೆ ಯೋಜನೆಯನ್ನು ಈ ಕೇಂದ್ರದ ಕೆಳಗೆ ತರಲಾಗಿದೆ. ಈ ಯೋಜನೆಯು ಮುಖಾಂತರ ರೈತರ ಜಮೀನಿನಲ್ಲಿ ಹೊಸ ವ್ಯವಸಾಯ ಪದ್ಧತಿಗಳನ್ನು ರೈತರಿಗೆ ಪ್ರಾತ್ಯಕ್ಷಿಸಲಾಗುವುದು,

ರಾಷ್ಟ್ರೀಯ ಕೃಷಿ ಸಂಶೋಧನಾ ಯೋಜನೆಯ ೨ನೇ ಹಂತದ ಆಡಿಯಲ್ಲಿ ನೀರಿನ ನಿರ್ವಹಣೆಯ ವಿಚಾರವಾಗಿ ಸವಿಸ್ತಾರವಾದ ಪರಿಶೋಧನೆಯಾಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಈ ಕಾರ್ಯಕ್ರಮವು ಪಾಣಿವಿಲಾಸ ಸಾಗರದ ಆಡಿಯಲ್ಲಿ ಬರುವ ಎಲ್ಲ ರೈತರಿಗೆ ಉಪಯುಕ್ತವಾಗುವುದು. ಅಲ್ಲದೆ ಈ ಕಾರ್ಯಕ್ರಮವು ಈ ಸಂಶೋಧನಾ ಕೇಂದ್ರಕ್ಕೆ ನೂತನವಾದ ಅಂಶವಾಗುವುದು.

ಅಧ್ಯಕ್ಷರು.—

ಶ್ರೀ ವಸಂತ ವಿ. ಸಾಲಿಯಾನ್.—ಸದಸ್ಯರು ಗೈರು ಹಾಜರಿ.